ಏನು ಮಾಡುತ್ತೀರಿ ಮತ್ತು ನಷ್ಟ ಆಗಿರುವ ಹಣವನ್ನು ಹೇಗೆ ರಿಕವರಿ ಮಾಡುತ್ತೀರಿ? ಹೀಗೆ ಆದರೆ ಹೇಗೆ?

ಅಧ್ಯಕ್ಷರು: ಮಾನ್ಯನಂಜೇಗೌಡರೆ, 'ಕಡಲು ನಿನ್ನದು, ದೋಣಿಯೂ ನಿನ್ನದು, ಮುಳಗದಿರಲಿ ಬದುಕು' ಅಷ್ಟೆ.

ಶ್ರೀ ಬಿ.ಶಿವರಾಮು: ಮಾನ್ಯ ಅಧ್ಯಕ್ಷರೆ, ಇದಕ್ಕೆ ಹಿನ್ನೆಲೆ ಏನು ಇದೆ? . ಆ ಇಂಜಿನಿಯರನ್ನು ಏಕೆ ಅಲ್ಲಿಯೇ ಇಟ್ಟುಕೊಂಡಿದ್ದಾರೆ? ಈ ಕೆಲಸವನ್ನು ಏಕೆ ಪ್ರಾರಂಭಮಾಡುತ್ತಿಲ್ಲ? ಸ್ಪೆಷಲ್ ಸ್ಕ್ವಾಡ್‌ನಿಂದ ಒಂದು ವರದಿ ಬಂದಿದೆ. ಇಂಜಿನಿಯರ್ಸ್ ಫಾಲೋ ಅಪ್ ಮಾಡುತ್ತಿರತಕ್ಕಂಥದ್ದು ಎಷ್ಟು? ಫೈಲ್ ಎಲ್ಲಿ ಹೋಯಿತು? ಹೇಗೆ ಆಯಿತು ನನಗೆ ಏನೂ ಮಾಹಿತಿ ಇಲ್ಲದೆ ಅದರ ಬಗ್ಗೆ ಪ್ರಶ್ನೆ ಮಾಡಲಿಕೆ ಹೊಗುತ್ತಿಲ್ಲ. ನಾನು ಹೆಚ್ಚಿಗೆ ಕೇಳುವುದಕ್ಕೆ ತಯಾರಿಲ್ಲ. ಅಷ್ಟಕ್ಕೆ ಸೂಕ್ಷ್ಮವಾಗಿ ನಾನು ಇದ್ದೇನೆ.

ಅಧ್ಯಕ್ಷರು: ಅದರ ಬಗ್ಗೆ ಡೀಟೈಲ್ಸ್ ತರಿಸಿಕೊಂಡು ಸೂಕ್ತ ಕ್ರಮತೆಗೆದುಕೊಳ್ಳುತ್ತೇವೆಂದು ಹೇಳಿ.

ಶ್ರೀ ಕೆ.ಎಂ.ಕೃಷ್ಣರೆಡ್ಡಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಅರ್ಥಮಾಡಿಕೊಳ್ಳುತ್ತೇನೆ. ಈ ವರದಿ ಆಧಾರದ ಮೇಲೆ ಜಿಲ್ಲಾ ಪಂಚಾಯತ್‌ನವರು ಸೂಕ್ತ ಕ್ರಮ ತೆಗೆದುಕೊಂಡಿದ್ದೇವೆಂದು ನಮಗೆ ವರದಿ ಕಳುಹಿಸಿದ್ದಾರೆ, ಆದರೂ ಕೂಡ ಅವರ ಪ್ರಕಾರ ಅದೇ ಅಧಿಕಾರಿ ಅಲ್ಲಿಯೇ ಕೆಲಸ ಮಾಡುತ್ತಿದ್ದಾರೆ, ಕಳಪೆ ಕೆಲಸ ಅದೇ ರೀತಿ ಇದೆ, ಕೆಲಸ ಮುಂದುವರಿಯುತ್ತಾ ಇಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದಾರೆ. ಇದರಬಗ್ಗೆ ಪರಿಶೀಲಿಸಿ ನಾನು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು: ಮಾನ್ಯ ಸಚಿವರ ಉತ್ತರ ನನಗೆ ತೃಪ್ತಿಯಾಗಿದೆ.

ವಿಷಯ: ಪರಿಶಿಷ್ಟ ಪಂಗಡಕ್ಕೆ ಸೇರಿದ ಮೇದ ಜಾತಿಯ ಕುರಿತು.

277 (2147)

ಶ್ರೀ ಹೆಚ್.ಡಿ.ಬಸವರಾಜ್ (ವಿರಾಜಪೇಟೆ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪರಿಶಿಷ್ಟ ಪಂಗಡಕ್ಕೆ ಸೇರಿದ ಮೇದ ಜಾತಿಯ ಪರ್ಯಾಯ ಪದವಾದ 'ಬುಡ್ಡರ್' ಜಾತಿಯನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮವೇನು?

ಆ) ಬಡ 'ಮೇದ' ಜನಾಂಗದವರ ಸಲುವಾಗಿ ಉಚಿತವಾಗಿ 'ಗಳ' ಮತ್ತು ಬೊಂಬುಗಳನ್ನು ನೀಡುವ ಬಗ್ಗೆ ಸರ್ಕಾರದ ನಿಲುವೇನು; ಈ ಬಗ್ಗೆ ಸರ್ಕಾರ ಎಷ್ಟು ಬೊಂಬು ಮತ್ತು ಗಳ ಗಳನ್ನು ಬಡ ಕುಟುಂಬಕ್ಕೆ ನೀಡಿದೆ?

ಶ್ರೀ ಕೆ.ಎಂ.ಕೃಷ್ಣ ರೆಡ್ಡಿ (ಸಮಾಜ ಕಲ್ಯಾಣ ಸಚಿವರು):

ಅ) ಬುಡ್ಡರ್ ಜನಾಂಗವನ್ನು ಪರಿಶಿಷ್ಟ ವರ್ಗದ ಪಟ್ಟಿಯಲ್ಲಿ ಸೇರಿಸುವ ವಿಷಯವನ್ನು ಇಂತಹ ಪ್ರಕರಣಗಳನ್ನು ಪರಿಶೀಲಿಸಲು ಪುನರ್ರಚಿತವಾಗಿರುವ ಸಮತಿಯ ಮುಂದೆ ಮಂಡಿಸಲಾಗಿದೆ. ಸಮಿತಿಯ ಶಿಫಾರಸ್ಸು ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಆ) ಸಮಾಜ ಕಲ್ಯಾಣ ಇಲಾಖೆಯಲ್ಲಿ ಇಂತಹ ಕಾರ್ಯಕ್ರಮ ಹಮ್ಮಿಕೊಂಡಿರುವುದಿಲ್ಲ

ಶ್ರೀ ಹೆಚ್.ಡಿ.ಬಸವರಾಜು: ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರವಾಗಿ ಇಲ್ಲಿ - ಪರಿಶೀಲಿಸಲು ಪುನರ್‌ರಚಿತವಾಗಿರುವ ಸಮಿತಿಯ ಮುಂದೆ ಮಂಡಿಸಲಾಗಿದೆಯೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು ಎಂದು ನಾನು ಇಲ್ಲಿ ಕೇಳಿರತಕ್ಕಂಥ ಪ್ರಶ್ನೆ 1976ರಲ್ಲಿಯೇ ಸಮಿತಿಯ ಮುಂದೆ ಮಂಡಿಸಲಾಗಿದೆ' ಎಂದು ಮಾನ್ಯ ಸಚಿವರು ಹೇಳಿದರೆ, ಇದು 1976ರಲ್ಲಿಯೇ ತೀರ್ಮಾನವಾಗಿದ್ದು ಇದನ್ನು ಪುನಃ ಇನ್ನೊಂದು ಸಲ ತೀರ್ಮಾನ ಮಾಡಬೇಕಾಗಿದೆಯೇ ಎಂಬುದನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ.

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ: ಮಾನ್ಯ ಅಧ್ಯಕ್ಷರೆ, - ಪರಿಶಿಷ್ಟ ಪಂಗಡಕ್ಕೆ ಸೇರಿದ 'ಮೇದ' ಜಾತಿಯ ಪರ್ಯಾಯ ಪದವಾದ 'ಬುಡ್ಡರ್' ಜಾತಿಯನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮವೇನು ಎಂದು ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. ಅದರ ಬಗ್ಗೆ ನಾವು ಒಂದು ಸಮಿತಿಯನ್ನು ನೇಮಿಸಿದ್ದೇವೆ, ಆ ವಿಚಾರ ಸಮಿತಿಯ ಮುಂದೆ ಬರುತ್ತದೆ ಎನ್ನತಕ್ಕಂಥ ಉತ್ತರವನ್ನು ಕೊಟ್ಟಿದ್ದೇವೆ. ಮುಂದಿನ ಪ್ರಶ್ನೆ ಏನೆಂದರೆ-ಬಡ 'ಮೇದ' ಜನಾಂಗದವರ ಸಲುವಾಗಿ ಉಚಿತವಾಗಿ 'ಗಳ' ಮತ್ತು ಬೊಂಬು'ಗಳನ್ನು ನೀಡುವ ಬಗ್ಗೆ ಸರ್ಕಾರದ ನಿಲುವು ಏನು? ಈ ಬಗ್ಗೆ ಸರ್ಕಾರ ಎಷ್ಟು 'ಬೊಂಬು ಮತ್ತು ಗಳ' ಗಳನ್ನು ಬಡ ಕುಟುಂಬಕ್ಕೆ ನೀಡಿದೆ ಎಂದು ಅವರು ಕೇಳಿದ್ದಾರೆ. ಅದಕ್ಕೆ ಉತ್ತರವಾಗಿ ನಮ್ಮ ಇಲಾಖೆಯಲ್ಲಿ ಇಂತಹ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಿಲ್ಲ ಎಂದು ಉತ್ತರವನ್ನು ಕೊಟ್ಟಿದ್ದೇವೆ.

ಶ್ರೀ ಹೆಚ್.ಡಿ.ಬಸವರಾಜು: ಮಾನ್ಯ ಅಧ್ಯಕ್ಷರೆ: 'ಪರ್ಯಾಯ ಪದವಾದ' ಬುಡ್ಡರ್'

ಜಾತಿಯನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವುದರ ಬಗ್ಗೆ ಪರಿಶೀಲಿಸಲು ಪುನರ್‌ರಚಿತವಾಗಿರುವ ಸಮಿತಿ ಮುಂದೆ ಮಂಡಿಸಲಾಗಿದೆ' ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ನಾನು ಏನು ಪ್ರಶ್ನೆ ಮಾಡುತ್ತಿದ್ದೇನೆಂದರೆ - 'ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕೆಂದು ಇದು 1976ರಲ್ಲಿಯೇ ತೀರ್ಮಾನವಾಗಿದೆ. ಪುನಃ ಇದನ್ನು ಇಲ್ಲಿ ಏಕೆ ಈ ತರಹ ಹೇಳುತ್ತಿದ್ದಾರೆ ಎಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ.

ಅಧ್ಯಕ್ಷರೆ: 1976ರಲ್ಲಿಯೇ ಮಾಡಿರುತ್ತಾರೆ. ಆ ಶಿಫಾರಸ್ಸನ್ನು ಕೇಂದ್ರಸರ್ಕಾರ ಒಪ್ಪಿರುವುದಿಲ್ಲ. ಮತ್ತೆ ಅದಕ್ಕೆ ಅವರು ಇನ್ನೂ ಏನೋ ಗೈಡ್‌ಲೈನ್ಸ್ ಕೊಟ್ಟು ಹೊಸದಾಗಿ ಪುನಃ ಇನ್ನೊಂದು ಕಮಿಟಿ ಕಾನ್ಸ್ಟಿಟ್ಯೂಟ್ ಮಾಡಿ ಎಂದು ಹೇಳಿರಬಹುದು. ಆ ಕಮಿಟಿ ಮತ್ತೆ ಶಿಫಾರಸ್ಸು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿರುತ್ತಾರೆ. ಅದನ್ನು ಅವರು ಹೇಳಿರುತ್ತಾರೆ ಅಷ್ಟೆ.

ಶ್ರೀ ಹೆಚ್.ಡಿ.ಬಸವಾರಾಜು: ಮಾನ್ಯ ಅಧ್ಯಕ್ಷರೆ, ಹಾಗೆ ಅಲ್ಲ, ಅದನ್ನು ಕೂಡ ನಾನು ಹೇಳುತ್ತಿದ್ದೇನೆ. ಏಕೆಂದರೆ 1976ರಲ್ಲಿ ಒಟ್ಟು 4 ಪರ್ಯಾಯ ಪದಗಳನ್ನು ಇಲ್ಲಿಂದ ರೆಕಮಂಡ್ ಮಾಡಿತ್ತು. ರೆಕಮೆಂಡ್ ಮಾಡಿದ್ದನ್ನು ಇತ್ತೀಚೆಗೆ ಇದು ಒಂದನ್ನು ಕೈಬಿಟ್ಟು, ಏಕೆಂದರೆ ಇದರ ಬಗ್ಗೆ ಅವತ್ತು ಗೆಜೆಟ್‌ನಲ್ಲಿ ಕೂಡ ಬಂದಿತ್ತು. ಇದು ಒಂದನ್ನು ಕೈಬಿಟ್ಟು ಮಾಡಿರುತ್ತಾರೆ, ಇದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ: ಮಾನ್ಯ ಅಧ್ಯಕ್ಷರೆ,-ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮ ಏನು ಎಂದು ಮಾನ್ಯ ಸದಸ್ಯರೇ ಆ ರೀತಿ ಪ್ರಶ್ನೆ ಕೇಳಿದ್ದಾರೆ. ಕೇಂದ್ರ ಸರ್ಕಾರ ಈಗಾಗಲೇ ಕ್ರಮ ತೆಗೆದುಕೊಂಡಿದ್ದರೆ ತಮ್ಮ ಪ್ರಶ್ನೆಯೇ ಉದ್ಭವಿಸುತ್ತಿರಲಿಲ್ಲ?

ಶ್ರೀ ಹೆಚ್.ಡಿ.ಬಸವರಾಜು: ಮಾನ್ಯ ಅಧ್ಯಕ್ಷರೆ, ನಾನು ಇಲ್ಲ ಎಂದು ಹೇಳುತ್ತಿಲ್ಲ. ನನಗೆ ಇಷ್ಟೆ ಬೇಕಾಗಿರುವುದು. ಅದೇನೆಂದರೆ-1976ರಲ್ಲಿಯೇ ಇದನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು. ಈಗ ಮತ್ತೆ ತಮ್ಮಲ್ಲಿ ಏನಾಗಿದೆ ಎಂದರೆ-ಈಗಾಗಲೇ ನಾವು ಮಾಡುತ್ತೇವೆಂದು ಹೇಳಿದ್ದಿದ್ದರೆ ನಾನು ಉಪಪ್ರಶ್ನೆಯನ್ನೇ ಕೇಳುತ್ತಿರಲಿಲ್ಲ. ಆದರೆ ಪುನರ್‌ರಚಿತವಾಗಿರುವ ಸಮಿತಿ ಮುಂದೆ ಮಂಡಿಸುತ್ತೇವೆಂದು ಹೇಳುತ್ತಿದ್ದೀರಿ. ಆದರೆ 1976ರಲ್ಲಿಯೇ ತೀರ್ಮಾನವಾಗಿರತಕ್ಕಂಥ ಈ ವಿಷಯವನ್ನು ಮತ್ತೊಂದು ಸಲ ಪುನರ್‌ರಚಿತವಾದಂಥ ಸಮಿತಿ ಮುಂದೆ ಮಂಡನೆಗೆ ಅವಕಾಶ ಇದೆಯೇ?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಕೇಂದ್ರ ಸರ್ಕಾರಕ್ಕೆ ನಾವು ಶಿಫಾರಸ್ಸು ಮಾಡಿದ್ದರೆ ಈಗ ಮಂಡಿಸತಕ್ಕಂಥ ಅವಶ್ಯಕತೆಯೇ ಇಲ್ಲ. ಇಲ್ಲಿ ಮಾನ್ಯ ಸದಸ್ಯರ ಪ್ರಶ್ನೆ ಇರುವಂಥದ್ದು ಏನೆಂದರೆ-ಇದನ್ನು ಕೇಂದ್ರಸರ್ಕಾರಕ್ಕೆ ಶಿಫಾರಸ್ಸು

ಮಾಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂದು ಕೇಳಿದ್ದಾರೆ. ಕೆಲವು ಪರ್ಯಾಯ ಪದಗಳನ್ನು ಪರಿಶಿಷ್ಟ ಜಾತಿಗೇ ಸೇರಿಸಬೇಕೆಂದು ಬೇಕಾದಷ್ಟು ಅರ್ಜಿಗಳು ನಮ್ಮ ಮುಂದೆ ಇವೆ. ಅದನ್ನೆಲ್ಲಾ ಕೂಡ ಕಮಿಟಿ ಮುಂದೆತರುತ್ತೇವೆ.

ಶ್ರೀ ಹೆಚ್.ಡಿ.ಬಸವರಾಜು: ಮಾನ್ಯ ಅಧ್ಯಕ್ಷರೆ, 1976ರಲ್ಲಿ ಕರ್ನಾಟಕ ರಾಜ್ಯ ಸರ್ಕಾರದಿಂದ ಒಂದು ಗೆಜೆಟ್‌ನ್ನು ಹೊರಡಿಸಿದೆ. ಆ ಗೆಜೆಟ್‌ನಲ್ಲಿ ಇವರು ಏನು ಮಾಡಿದ್ದಾರೆಂದರೆ-ಪರಿಶಿಷ್ಟ ಪಂಗಡಕ್ಕೆ ಸೇರಿದೆ ಎಂದು ಡಿಕ್ಲೇರ್ ಮಾಡಿದ್ದಾರೆ. ಅದನ್ನು ತಮ್ಮ ಮೂಲಕ ಮಾನ್ಯ ಸಮಾಜ ಕಲ್ಯಾಣ ಸಚಿವರಿಗೆ ಕಳುಹಿಸಿಕೊಡುತ್ತೇನೆ. ಪುನಃ ಅದನ್ನು ಪರಿಶೀಲನೆ ಮಾಡಿ ನನಗೆ ಸರಿಯಾದ ಉತ್ತರವನ್ನು ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಆಲ್ ರೈಟ್, ತಾವು ಅದನ್ನು ಕಳುಹಿಸಿಕೊಡಿ.

ವಿಷಯ: ರೇಷ್ಮೆ ಇಲಾಖೆಗೆ ವಿಶ್ವಬ್ಯಾಂಕ್‌ನ ನೆರವು.

281 (2475)

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ರೇಷ್ಮೆ ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರೇಷ್ಮೆ ಇಲಾಖೆಗೆ ಇದುವರೆವಿಗೂ ವಿಶ್ವ ಬ್ಯಾಂಕಿನಿಂದ ಅಭಿವೃದ್ಧಿಗಾಗಿ ಪಡೆದಿರುವ ಹಣವೆಷ್ಟು?

ಆ) ಇಲಾಖೆಯ ಅಭಿವೃದ್ಧಿಗಾಗಿ ಈ ಹಣದಿಂದ ಹಮ್ಮಿಕೊಂಡಿರುವ ಕಾರ್ಯಕ್ರಮಗಳಾವುವು?

ಇ) ಇದರಿಂದ ಇಲಾಖೆಗೆ ಯಾವ ಯಾವ ವಲಯದಲ್ಲಿ ಎಷ್ಟು ಎಷ್ಟು ಪ್ರಯೋಜನವಾಗಿದೆ.

ಶ್ರೀ ಎಂ.ವರದೇಗೌಡ (ರೇಷ್ಮೆ ರಾಜ್ಯ ಸಚಿವರು):

ಅ) 1. ಮೊದಲನೆ ಹಂತ ರೂ.59.34 ಕೋಟಿಗಳಲ್ಲಿ (ಕೆ.ಎಸ್.ಪಿ. ರೂ.53.95 ಮಿಲಿಯನ್ ಡಾಲರ್‌ಗಳಲ್ಲಿ)

2. 2ನೇ ಹಂತ
ಎನ್ ಎಸ್ಸಿ: ರೂ.65.92 ಕೋಟಿಗಳಲ್ಲಿ
ಒಟ್ಟು ರೂ.125.26 ಕೋಟಿಗಳಲ್ಲಿ
(ರೈತರಿಗೆ ನೀಡಿದ ಸಾಲದ ಬಾಬ್ತು ಹೊರತುಪಡಿಸಿ)